ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ:198:ಆಡಿಟ್-14:2017-18:ನೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು,
ದಿನಾಂಕ:26.09.2017

# ಸುತ್ತೋಲೆ

**ವಿಷಯ:** 2009ರಲ್ಲಿ ಕೆ.ಪಿ.ಎಸ್.ಸಿ. ಮೂಲಕ ನೇಮಕಗೊಂಡಿರುವ ಸಹಾಯಕ ಪ್ರಾಧ್ಯಾಪಕರುಗಳ ಪದವಿಗಳ ನೈಜತೆಯನ್ನು ಪರಿಶೀಲಿಸುವ ಬಗ್ಗೆ.

**ಉಲ್ಲೇಖ:** ಮಹಾಲೇಖಾಪಾಲರು, ಕರ್ನಾಟಕ ರಾಜ್ಯ ಇವರ ಆಡಿಟ್ ಆಕ್ಷೇಪಣಾ ವರದಿ ದಿನಾಂಕ:05.07.2017.

** ** **

ಮಹಾಲೇಖಾಪಾಲರು, ಕರ್ನಾಟಕ ರಾಜ್ಯ ಇವರ ಉಲ್ಲೇಖಿತ ಆಡಿಟ್ ಆಕ್ಷೇಪಣಾ ವರದಿಯಲ್ಲಿ 2009ರಲ್ಲಿ ಆಯ್ಕೆಯಾದ ಸಹಾಯಕ ಪ್ರಾಧ್ಯಾಪಕರುಗಳು ಆಯ್ಕೆ ಸಂದರ್ಭದಲ್ಲಿ ಎಂ.ಫಿಲ್. ಪ್ರಮಾಣ ಪತ್ರದ ನೈಜತೆಯನ್ನು ಪರಿಶೀಲಿಸಿ, ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2009ರಲ್ಲಿ ಕೆ.ಪಿ.ಎಸ್.ಸಿ ಮೂಲಕ ನೇಮಕಗೊಂಡಿರುವ ಸಹಾಯಕ ಪ್ರಾಧ್ಯಾಪಕರುಗಳು ಆಯ್ಕೆ ಸಮಯದಲ್ಲಿ ಸಲ್ಲಿಸಿರುವ ಎಂ.ಫಿಲ್. ಪ್ರಮಾಣ ಪತ್ರದ ನೈಜತೆಯನ್ನು ಪರಿಶೀಲಿಸಲು ಈ ಅವಧಿಯಲ್ಲಿ ಆಯ್ಕೆಯಾಗಿ ತಮ್ಮ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹ/ಸಹಾಯಕ ಪ್ರಾಧ್ಯಾಪಕರುಗಳ (ಪಟ್ಟಿಯೊಂದಿಗೆ) ಎಂ.ಫಿಲ್. ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಯ ಪ್ರತಿಯನ್ನು ಪಡೆದು, ದೃಢೀಕರಿಸಿ, ದಿನಾಂಕ:28.09.2017ರೊಳಗಾಗಿ ಸಾಫ್ಟ್ ಕಾಪಿಯನ್ನು ಇ-ಮೇಲ್ ವಿಳಾಸ dce.mphil2009@gmail.com ಗೆ ಹಾಗೂ ಹಾರ್ಡ್ ಕಾಪಿಯನ್ನು ಈ ಕಛೇರಿಗೆ ಕಳುಹಿಸಿಕೊಡುವಂತೆ ಸೂಚಿಸಲಾಗಿದೆ.

26/9/17

**ಕಾಲೇಜು ಶಿಕ್ಷಣ ಆಯುಕ್ತರು**

**ಇವರಿಗೆ:**

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿ ರವಾನೆ;**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತ್ತು ಕಲಬುರಗಿ.
3) ಕಛೇರಿ ಪ್ರತಿ